ಓ.ಎಸ್. ನಂ.305/2018ರಲ್ಲಿ
ಪಿ.ಡಬ್ಲ್ಯೂ-1(ಚಂದ್ರಕಲಾ)

ದಿನಾಂಕ 05-01-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಡಿಪಿ ವಕೀಲರಿಂದಃ-

ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಬರುತ್ತದೆ. ನಾನು 10ನೇ ತರಗತಿವರೆಗೆ ಕಲಿತಿದದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ಈ ದಾವೆಯನ್ನು ನ್ಯಾಯ ಕೋರಿ ಸಲ್ಲಿಸಿದ್ದೇನೆ. 2ನೇ ಪ್ರತಿವಾದಿ ನನ್ನ ಮಾವ. 1ನೇ ಪ್ರತಿವಾದಿ ನನ್ನ ಪತಿ. 3ನೇ ಪ್ರತಿವಾದಿ ನನ್ನ ಮೈದ. 1 ಮತ್ತು 2ನೇ ವಾದಿಗಳು ನನ್ನ ಮಕ್ಕಳು. ದಾವಾ ಐಟಂ ನಂ 1 ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಐಟಂ ನಂ 1 2ನೇ ಪ್ರತಿವಾದಿ ಸ್ವಯಾರ್ಜಿತವಾಗಿ ಖರೀದಿ ಮಾಡಿರುವ ಸ್ವತ್ತು ಅಂದರೆ ಸಾಕ್ಷಿ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ನಿಪಿ 2ರಲ್ಲಿ ಕ್ರಯ ಎಂದು ನಮೂದು ಆಗಿದೆ ಅಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಪಿ 16ರಲ್ಲಿ ಕೃಷ್ಣಮೂರ್ತಿಯವರು ಕ್ರಯಕ್ಕೆ ಕೊಂಡು ಕೊಂಡಿದ್ದಾರೆಂದು ನಮೂದು ಇದೆ ಅಂದರೆ ಸಾಕ್ಷಿ ಬರೆದಿದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ 1, 2ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಆಗಿದ್ದು ಅದರಲ್ಲಿ ವಾದಿಗಳಿಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ. ದಾವಾ ಐಟಂ ನಂ 2 ಒಟ್ಟು ಕುಟುಂಬದ ಸ್ವತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ದಾವಾ ಐಟಂ ನಂ 2, 2ನೇ ಪ್ರತಿವಾದಿಯವರು ಸಾರ್ವಜನಿಕ ಹರಾಜಿನಲ್ಲಿ ಖರೀದಿ ಮಾಡಿರುವ ಆಸ್ತಿ ಅಂದರೆ ಸರಿ. ನಿಪಿ 14ರಲ್ಲಿ ಆ ಬಗ್ಗೆ ನಮೂದು ಇದೆ ಅಂದರೆ ಸರಿ. ಬಹಿರಂಗ ಹರಾಜಿನ ಮೂಲಕ 2ನೇ ಪ್ರತಿವಾದಿಯು ದಾವಾ ಐಟಂ ನಂ 2 ನ್ನು ಖರೀದಿ ಮಾಡಿರುವುದರಿಂದ ವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ದಾವಾ ಐಟಂ ನಂ 4 ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲೆ

<u>ಓ.ಎಸ್. ನಂ.305/2018ರಲ್ಲಿ</u>
ಪಿ.ಡಬ್ಲ್ಯೂ-1(ಚಂದ್ರಕಲಾ)

ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಐಟಂ ನಂ 4ರ ಸಂಬಂದ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜುರಪಡಿಸಿಲ್ಲ ಅಂದರೆ ಸರಿಯಲ್ಲ. ದಾವಾ ಐಟಂ ನಂ 4 ರ ಪಹಣಿಯಲ್ಲಿ ಪ್ರತಿವಾದಿಗಳ ಹೆಸರು ಬರುತ್ತಿಲ್ಲ ಅಂದರೆ ಸಾಕ್ಷಿ 2ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ 5 ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಐಟಂ ನಂ 5ರ ವಿಸ್ತೀರ್ಣ ಮತ್ತು ಖಾನೇಶುಮಾರಿ ನಂಬರ ಅನ್ನು ವಾದ ಪತ್ರದಲ್ಲಿ ಬರೆಸಿಲ್ಲ ಅಂದರೆ ಸರಿ. ದಾವಾ ಐಟಂ ನಂ 5ನ್ನು ವಿಸ್ತೀರ್ಣ ತೋರಿಸದೇ ಹಾಗೂ ಖಾನೇಶುಮಾರಿ ನಂಬರ ತೋರಿಸದೇ ನ್ಯಾಯಾಲಯದ ದಿಕ್ಕು ತಪ್ಪಿಸುವ ಉದ್ದೇಶದಿಂದ ದಾವಾ ಐಟಂ ನಂ 5 ನ್ನು ಸೇರಿಸಿದ್ದೇವೆಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ರೂ.200/- ವೆಚ್ಚದೊಂದಿಗೆ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.